O.S. ನಂಬರಃ 97/2018
ಪಿ. ಡಬ್ಲ್ಯೂಃ 1

ದಿಃ 26-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ರವರಿಂದಃ

ಬಂಟಾ ಮಂಕಾಳು ಗೌಡನ ವಂಶಾವಳಿಯನ್ನು ಹಾಜರುಪಡಿಸಿರುತ್ತೇನೆ. ಬೇಡಿ ಬಂಟಾ ಗೌಡ ಮೊದಲನೆ ಹೆಂಡತಿಯಾಗಿದ್ದು, ಸಣ್ಣು ಬಂಟಾ ಗೌಡ 2 ನೇ ಹೆಂಡತಿ ಎಂದರೆ ಸರಿ. ನಾನು ಬೇಡಿ ಬಂಟಾ ಗೌಡ ಈಕೆಯನ್ನು ನೋಡಿರುತ್ತೇನೆ. ಬಂಟಾ ಮಂಕಾಳು ಗೌಡ ಈತನು ಸಣ್ಣು ಬಂಟಾ ಗೌಡ ಈಕೆಯನ್ನು ಮದುವೆಯಾಗುವ ಸಂದರ್ಭದಲ್ಲಿ ಮೊದಲನೆ ಹೆಂಡತಿಯಾದ ಬೇಡಿ ಬಂಟಾ ಗೌಡ ಜೀವಂತ ಇದ್ದಳು ಎಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಬಂಟಾ ಗೌಡನಿಗೆ ದಾವಾ ಆಸ್ತಿಗಳಲ್ಲಿ ಎಷ್ಟು ಅಂಶ ಹಕ್ಕು ಇರುತ್ತದೆ ಎಂದು ಗೊತ್ತಿರುವುದಿಲ್ಲ. ನನ್ನ ತಂದೆಗೆ ಒಬ್ಬ ಸಹೋದರ ಇದ್ದನು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂದತೆ ನನ್ನ ತಂದೆಗೆ ಅರ್ಧ ಹಕ್ಕು ಹಾಗೂ ಆತನ ಸಹೋದರನಿಗೆ ಅರ್ಧ ಹಕ್ಕು ಇತ್ತು ಎಂದರೆ ಸರಿ. ಸಣ್ಣು ಅಥವಾ ಬೇಡಿ ಮಕ್ಕಳ ಮಧ್ಯ ಯಾವುದೆ ವಾಂಟಣಿ ಆಗಿದ್ದು ಇರುವುದಿಲ್ಲ. ನನ್ನ ತಂದೆಗೆ,

ಮೊದಲನೆ ಹೆಂಡತಿ ಹಾಗೂ 4 ಮಕ್ಕಳಿಗೆ ದಾವಾ ಆಸ್ತಿಗಳಲ್ಲಿ ಸಮಪಾಲು ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾಂಟಣಿಯಾದರೆ ನನ್ನ ತಂದೆಗೆ 1/10 ಅಂಶ ಹಕ್ಕು ಬರುತ್ತದೆ ಎಂದರೆ ಸರಿ. ನನ್ನ ತಂದೆಯ 1/10 ಅಂಶ ಹಕ್ಕಿನಲ್ಲಿ 1 ಮತ್ತು 2 ನೇ ಹೆಂಡತಿಯರ ಮಕ್ಕಳಿಗೆ ಸಮಪಾಲು ಇರುತ್ತದೆ ಎಂದರೆ ಸರಿ.

2. ಸಾಲು ಬುದ್ದು ಗೌಡ, ಗೋವಿಂದ ಕೃಷ್ಣ ಗೌಡ, ತೊಕು ಮಂಕಾಳು ಗೌಡ, ಈರಾ ಕೃಷ್ಣಾ ಗೌಡ ಮತ್ತು ಕರಿಯಾ ಕೃಷ್ಣಾ ಗೌಡ ಇವರೂ ಸಹ ಸಂಬಂಧಿಕರು ಆಗಿದ್ದು, ಅವರಿಗೂ ಸಹ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ. ಒಂದು ವೇಳೆ ವಾಂಟಣಿಯಾದರೆ ನಮ್ಮ ತಂದೆಯ ಅರ್ಧ ಅಂಶ ಹಕ್ಕಿನಲ್ಲಿ 1 ನೇ ಹೆಂಡತಿಯ ಮಕ್ಕಳಿಗೆ ಸಮಪಾಲು ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಯಾವ ಆಸ್ತಿಯ ನೌಕಾ ನೆಲೆಗೆ ಭೂ ಸ್ವಾಧೀನತೆಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ಯಾವುದೂ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಹಿರೆ ಹಂಡತಿಯ ಮಗಳು ಗಂಗೆ ಬಂಟಾ ಗೌಡ ಮರಣಪಟ್ಟಿರುತ್ತಾಳೆ ಎಂದರೆ ಸರಿ. ಆಕೆಗೆ ಎಷ್ಟು ಜನ ಮಕ್ಕಳು ಎಂದರೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ವಾಂಟಣಿಯಾದರೆ ಗಂಗೆಗೆ ಬರುವ ಪಾಲಿನಲ್ಲಿ ಆಕೆಯ ಮಕ್ಕಳಿಗೆ ವಾಂಟಣಿ ಮಾಡಿಕೊಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ದಾವಾ ಆಸ್ತಿಯನ್ನು ವಾಂಟಣಿ ಮಾಡಿಕೊಳ್ಳೋಣ ಎಂದು ಗಂಗೆಯ ಮಕ್ಕಳ ಜೊತೆಗೆ ಮಾತನಾಡಿಕೊಂಡಿರುವುದಿಲ್ಲ. ನಾನು ದಾಕವೆಯಲ್ಲಿ ವಾಂಟಣಿ

ಮಾಡಿಕೊಳ್ಳೋಣ ಎಂದು ಕೇಳಿದ್ದು, ಅದಕ್ಕೆ ಅವರು ಒಪ್ಪಿರುವುದಿಲ್ಲ ಎಂದು ಹಾಗೂ ಏಪ್ರೀಲ್ 2017 ರಂದು ದಾವಾ ಸಲ್ಲಿಸಲು ದಾವಾ ಕಾರಣ ಉದ್ಭವಿಸಿರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ತಂದೆಯು ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಜಮೀನು ಪ್ರತ್ಯೇಕವಾಗಿ ಇರುತ್ತದೆ ಎಂದರೆ ಸರಿ. ಹಿರೆ ಹೆಂಡತಿಯ ಮಗ ಮಂಕಾಳು ಬಂಟ ಗೌಡ ಈತನು ರೂ.1,80,000/- ಸಾಲವನ್ನು ಪಡೆದುಕೊಂಡಿರುತ್ತಾನೆ. ಆತನು ಸಾಲವನ್ನು ತುಂಬಿರುತ್ತಾನೊ ಅಥವಾ ಬಾಕಿ ಇರುತ್ತದೆಯಾ ಎಂದರೆ ಸಾಕ್ಷಿಯು ಸಾಲವನ್ನು ನಾನೇ ತುಂಬಿರುತ್ತೇನೆ ಎಂದು ನುಡಿಯುತ್ತಾರೆ. ಸಾಲವನ್ನು ತುಂಬಿದ್ದರ ಬಗ್ಗೆ ದಾಖಲಾತಿಗಳು ಇರುತ್ತವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮಂಕಾಳು ಬಂಟಾ ಗೌಡ ತೀರಿಕೊಂಡಿರುತ್ತಾನೆ ಎಂದರೆ ಸರಿ. ಹಣವನ್ನು ವಾಪಸ್ಸು ಕೊಡಬೇಕೆಂದು ಮಂಕಾಳು ಬಂಟಾ ಗೌಡನ ವಾರಸುದಾರರ ವಿರುದ್ಧ ಏನಾದರೂ ಕ್ರಮವನ್ನು ತೆಗೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಾಲವು ಪೂರ್ತಿ ಚುಕ್ತಾ ಆಗಿದೆಯೋ ಅಥವಾ ತುಂಬುವುದು ಬಾಕಿ ಇರುತ್ತದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4. ಅಮಾಸ್ಯೆ ಬಂಟಾ ಗೌಡ ನನ್ನ ಅಣ್ಣ.  ಮಂಕಾಳಿ ಬಂಟಾ ಗೌಡ ನನ್ನ ತಂಗಿ.  ದಾವಾ ಆಸ್ತಿಗಳೆಲ್ಲವೂ 1 ಮತ್ತು 2 ನೇ ಹೆಂಡತಿಯ ಮಕ್ಕಳ ಸಾಮೂಹಿಕ ಕಬ್ಜಾ ವಹಿವಾಟಿನಲ್ಲಿ ಇರುತ್ತವೆ ಎಂದರೆ ಸರಿ.  ದಾವಾ ಮಾಡಲು ಯಾವುದೇ ಕಾರಣ ಇರದಿದ್ದರೂ ಸಹ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.